ರೋಸಿಯ ಭಯ. ಅಮ್ಮನ ವಿಷಯ ನೆನಪಿಸಿಕೊಂಡರೆ ದುಃಖವೆನಿಸುತ್ತಿತ್ತು. ಅವರು ತಾಯಿಯನ್ನು ಹೊಡೆದು ಕೊಲ್ಲುವರೆಂದೇ ಅವಳು ಹೆದರಿದ್ದಳು. ಈ ಮನುಷ್ಯರು ಎಷ್ಟು ನಿರ್ದಯಿಗಳು...

"ಕಯಿಂ...ಕುಯಿಂ..."

ದೂರದಿಂದ ದಯನೀಯವಾದ ಆ ಆರ್ತನಾದ ಕೇಳಿಸಿತು. ಖಂಡಿತವಾಗಿಯೂ ಅದು ಅವಳ ತಾಯಿಯದೇ... ರೋಸಿಯ ಹೃದಯ ಕುಸಿಯುತ್ತಿತ್ತು...

ಸ್ವಲ್ಪ ಸಮಯದ ಬಳಿಕ ಜಯಭೇರಿಯೊಡನೆ ಕುಟ್ಟ ಮತ್ತು ನಾಣು ಆ ಸೌದೆ ಕೊಟ್ಟಿಗೆಯ ಸಮೀಪದಿಂದ ಬಂದರು.

"ಕುಟ್ಟನ ಪೆಟ್ಟು ತಾಗಿತು..."

"ನಾಣು, ನನ್ನ ಪೆಟ್ಟು ನೆತ್ತಿಗೆ... ಇನ್ನು ಈ ಜನ್ಮದಲ್ಲಿ ಅದಿತ್ತ ಬರಲಾರದು..."

ಸೌದೆ ಕೊಟ್ಟಿಗೆಯ ಬಾಗಿಲಿನೆಡೆಗೆ ತಲುಪಿದಾಗ ಅವಳು ಒಳಗಡೆಗೆ ಕಣ್ಣುಹಾಯಿಸಿದರು. ಒಳಗೆ ಹೆದರಿಕೆಯಾದರೂ ರೋಸಿ ಧೈರ್ಯದಿಂದ ಅವರನ್ನು ನೋಡಿದಳು. ಆಗ ಅವಳ ಕಣ್ಣುಗಳು ಸಿಟ್ಟಿನಿಂದ ಜ್ವಲಿಸುತ್ತಿದ್ದವು.

"ನಾಣು, ಇನ್ನು ಇದನ್ನು ಏನು ಮಾಡುವುದು?"

"ಬರಲಿ, ಈಗ ಇದು ಒಂದು ಏಟಿಗೆ ಸಾಲದು..."

"ಏನನ್ನೂ ಕೊಡದಿದ್ದರಾಯಿತು, ಆದರೆ ತಾನೇ ಎಲ್ಲಾದರೂ ಹೋದೀತು..."

"ಜಿಮ್ಮಿಯನ್ನು ಹಿಡಿದು ಕೂಡಿ ಹಾಕಬೇಕು."

ಅವರು ಮುಂದೆ ಸಾಗಿದರು.

ಹಗಲಿಡೀ ರೋಸಿ ಸೌದೆ ಕೊಟ್ಟಿಗೆಯಲ್ಲಿಯೇ ಕಳೆದಳು. ಸಂಜೆಯಾದರೂ ತಾಯಿ ಮರಳಿ ಬರಲಿಲ್ಲ. ತನ್ನ ರಕ್ಷಣೆಗಾಗಿ ಅಮ್ಮ ಓಡಿಹೋದರೂ ಮರಳಿ ಬರಬಹುದೆಂಬುದು ರೋಸಿಯ ವಿಶ್ವಾಸ.

ಅವಳು ಕಾದು ಕುಳಿತಳು.

ಒಂದು ವೇಳೆ ಅವರು ತಾಯಿಯನ್ನು ಕೊಂದಿರಬಹುದೇ? ಅಥವಾ ಎಲ್ಲಾದರೂ ಗಾಯಗೊಂಡು ಬಿದ್ದಿರಬಹುದೇ? ಅವಳು ಮೆಲ್ಲನೆ ಹೊರಗಿಳಿದಳು.

ಕತ್ತಲಾವರಿಸುವ ಹೊತ್ತು. ಮನೆಯಲ್ಲಿ ದೀಪಗಳು ಪ್ರಭೆಯಿಂದ ಬೆಳಗುತ್ತಿವೆ. ರೋಸಿ ಹಿತ್ತಿಲಲ್ಲಿ ಎಲ್ಲೆಡೆ ಒಮ್ಮೆ ನಡೆದು ನೋಡಿದಳು. ತಾಯಿಯ ಯಾವುದೇ ಸುಳಿವಿಲ್ಲ. ಕೊನೆಗೆ ಅವಳು ಮರಳಿ ಬಂದಳು.

ಪೋರ್ಟಿಕೋದ ಮುಂಭಾಗ ತಲುಪಿದಾಗ ಅವಳು ಮೆಲ್ಲನೆ ಒಮ್ಮೆ ಜಗಲಿಯತ್ತ ನೋಡಿದಳು. ಪತ್ರಿಕೆ ಓದುತ್ತಿರುವ ಯಜಮಾನನ ಕಾಲಿನ ಬುಡದಲ್ಲಿ ಜಿಮ್ಮಿ ಮಲಗಿದ್ದಾನೆ. ರೋಸಿಯನ್ನು ಜಿಮ್ಮಿ ನೋಡಿರಲಾರ. ಅವಳು ತಲೆ ತಗ್ಗಿಸಿ ನಡೆದಳು. ಹಸಿವು ಹೊಟ್ಟೆಯಲ್ಲಿ ದೊಡ್ಡ ಆಕ್ರಮಣವನ್ನೇ ಮಾಡಹತ್ತಿದೆ. ಮಧ್ಯಾಹ್ನ ಸಿಕ್ಕಿದ ಊಟದ ಭಾರವೆಲ್ಲ ಕಳೆದುಹೋಯಿತು. ಎಂಜಲೆಲೆಗಳು ಬರುವುದನ್ನು ಕಾಯುತ್ತ ಅವಳು ಮಲಗಿದಳು.

ಅಡುಗೆಕೋಣೆಯಿಂದ ಹೊಮ್ಮಿ ಬರುವ ಕರಿದ ಪರಿಮಳ ಬಾಯಲ್ಲಿ ನೀರೂರಿಸಿ, ರೋಸಿಯ ಸುತ್ತಲೂ ಆವರಿಸಿದೆ... ರಾತ್ರಿಯ ಊಟಕ್ಕೆ ಮಾಂಸದ ಅಡುಗೆಯಿತ್ತು. ಅದಿದ್ದರೆ ಯಜಮಾನರಿಗೆ ಊಟ ಸುಖಪ್ರದ. ಅದರಿಂದಾಗಿ ಜಿಮ್ಮಿಗೆ ಯಾವಾಗಲೂ ಮಾಂಸ ಸಿಗುತ್ತದೆ.

ರೋಸಿ ಮಾಂಸ ತಿಂದ ಕಾಲವನ್ನೇ ಮರೆತಿದ್ದಾಳೆ. ಯಾವಾಗಲಾದರೂ ಕಡಿದರೂ ತುಂಡಾಗದ ಒಂದು ಎಲುಬಿನ ತುಂಡು ಸಿಗುತ್ತಿತ್ತು.

